ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,ಬೆಳಗಾವಿ

**Visvesvaraya Technological University**

**"Jnana Sangama", Belagavi - 590 018, Karnataka State**

**Dr. Satish Annigeri**
**REGISTRAR (I/C)**

**Phone : (0831) 2498100**
**Fax : (0831) 2405467**


**Ref VTU/BGM/Aca-OS/Gen-Cirs/2019-20/** 258 **Date :** 9 APR 2019

## ಸುತ್ತೋಲೆ

ವಿಷಯ : ೨೦೧೯-೨೦ನೇ ಶೈಕ್ಷಣಿಕ ಸಾಲಿಗೆ ಸಂಬಂದಿಸಿದಂತೆ ಪ್ರವೇಶ ನಿರಾಕರಿಸದಿರುವುದು, ಮೂಲ ದಾಖಲಾತಿಗಳನ್ನು ತಡೆ ಹಿಡಿಯದಿರುವುದು, ಅಧಿಕ ಶುಲ್ಕ ಪಡೆಯದಿರುವುದು ಕುರಿತು

ಉಲ್ಲೇಖ: ಸರ್ಕಾರಿ ಸುತ್ತೋಲೆ ಸಂಖ್ಯೆ ಇಡಿ ೨೧೧ ಟಿಇಸಿ ೨೦೧೮(ಭಾ) ದಿ: ೨೬-೦೩-೨೦೧೯

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಆದೇಶ ಸಂಖ್ಯೆ ಇಡಿ ೨೧೧ ಟಿಇಸಿ ೨೦೧೮(ಭಾ) ದಿ: ೨೬-೦೩-೨೦೧೯ಯನ್ನು ಲಗತ್ತಿಸಲಾಗಿದೆ.

ಕಾರಣ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲ ಕಾಲೇಜುಗಳು ಸದರಿ ಸರ್ಕಾರಿ ಸುತ್ತೋಲೆಯಲ್ಲಿ ನಮೂದಿಸಿದ ಅಂಶಗಳಂತೆ ಗಮನಿಸಿ, ಸೂಕ್ತ ಕ್ರಮ ಜರುಗಿಸಲು ಹಾಗೂ ಸಂಬಂದಿಸಿದವರಿಗೆ ಮಾಹಿತಿ ನೀಡಲು ಈ ಮೂಲಕ ತಿಳಿಸಲಾಗಿದೆ.

**ಅಡಕ: ಮೇಲಿನಂತೆ**

**ಕುಲಸಚಿವರು**
**ವಿ.ತಾ.ವಿ. ಬೆಳಗಾವಿ**

**ಇವರಿಗೆ,**
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಎಲ್ಲ ಅಧೀನ ಮಹಾವಿದ್ಯಾಲಯಗಳ (ಸಂಯೋಜಿತ, ಸ್ವಾಯತ್ತ ಹಾಗೂ ಘಟಕ) ಪ್ರಾಂಶುಪಾಲರಿಗೆ

**ಪ್ರತಿ ಮಾಹಿತಿಗಾಗಿ:**

೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹು ಮಹಡಿ ಕಟ್ಟಡ, ಬೆಂಗಳೂರು – ೫೬೦ ೦೦೧
೧. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ), ಬಹು ಮಹಡಿ ಕಟ್ಟಡ, ಬೆಂಗಳೂರು – ೫೬೦ ೦೦೧
೨. ಕುಲಪತಿಗಳ ಕಾರ್ಯದರ್ಶಿಗಳು, ವಿತಾವಿ, ಬೆಳಗಾವಿ
೩. ಸಿಎನ್‌ಸಿ ಘಟಕ ವಿತಾವಿ, ಬೆಳಗಾವಿ

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 211 ಟಿಇಸಿ 2018(ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, 2ನೇ ಗೇಟ್, 6ನೇ ಮಹಡಿ,
ಬೆಂಗಳೂರು, ದಿನಾಂಕ:26-03-2019.

Inward No. 141
Date:

## ಸುತ್ತೋಲೆ

ರಾಜ್ಯದ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸಂಘಟನೆಗಳು ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಅನ್ವಯ 2019-20ನೇ ಸಾಲಿನ ವೃತ್ತಿಪರ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕೋರ್ಸುಗಳ ಸೀಟು ಹಂಚಿಕೆಗೆ ಪೂರ್ವ ಸಿದ್ಧತೆಯನ್ನು ಕೈಗೊಳ್ಳಲಾಗುತ್ತಿದೆ. ಪ್ರತಿ ವರ್ಷವು ವೃತ್ತಿಪರ ಕೋರ್ಸುಗಳ ಸೀಟು ಹಂಚಿಕೆ ಪ್ರಕ್ರಿಯೆ ಸಂದರ್ಭದಲ್ಲಿ ಮತ್ತು ತದನಂತರದಲ್ಲಿ ಕೆಲವೊಂದು ಅಡಚಣೆಗಳನ್ನು ಎದುರಿಸುತ್ತಿದ್ದು, ಸದರಿ ಅಡಚಣೆಗಳನ್ನು ನಿವಾರಿಸುವ ಸಂಬಂಧ ಈ ಕೆಳಕಂಡಂತೆ ಎಲ್ಲಾ ವೃತ್ತಿಪರ ಸಂಸ್ಥೆಗಳು ಕಡ್ಡಾಯವಾಗಿ ಕ್ರಮವಹಿಸುವಂತೆ ಸೂಚಿಸಲಾಗಿದೆ.

1. ಆಡಳಿತ ಮಂಡಳಿ ಕೋಟಾದ ಸೀಟುಗಳನ್ನು ಸರ್ಕಾರಕ್ಕೆ ಒಂದು ವೇಳೆ ಆಡಳಿತ ಮಂಡಳಿಗಳು/ಸಂಸ್ಥೆಗಳು ಅಧ್ಯರ್ಪಿಸಲು ಇಚ್ಛಿಸಿದ್ದಲ್ಲಿ, ಜೂನ್ 30ರೊಳಗಾಗಿ ಅಧ್ಯರ್ಪಿಸುವುದು. ತದನಂತರದಲ್ಲಿ ಸ್ವೀಕೃತವಾಗುವ ಅಧ್ಯರ್ಪಿತ ಸೀಟುಗಳನ್ನು (Surrender Seats) ಪರಿಗಣಿಸುವುದಿಲ್ಲ.

2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಹಂಚಿಕೆಗೊಂಡ ಅಭ್ಯರ್ಥಿಗಳನ್ನು ಸಂಸ್ಥೆಗಳು ಆಯಾ ಸಂಸ್ಥೆಯಲ್ಲಿನ ಕೋರ್ಸುಗಳಲ್ಲಿ ಕಡಿಮೆ ಪ್ರವೇಶಾತಿ ಇರುವುದಾಗಿ ಪ್ರವೇಶಾತಿಯನ್ನು ನಿರಾಕರಿಸುತ್ತಿದ್ದು, ಅಭ್ಯರ್ಥಿಗಳ ಭವಿಷ್ಯದ ದೃಷ್ಟಿಯಿಂದ ಪ್ರವೇಶಾತಿಯನ್ನು ನಿರಾಕರಿಸದಿರುವುದು ಹಾಗೂ ಕಡಿಮೆ ಪ್ರವೇಶಾತಿ ಇರುವ ಕೋರ್ಸುಗಳನ್ನು ಆಯಾ ಸಂಸ್ಥೆಗಳು ಏಪ್ರಿಲ್ 2019ರೊಳಗಾಗಿ ಮುಚ್ಚಲು ಕ್ರಮವಹಿಸುವುದು.

3. ಯಾವುದೇ ವೃತ್ತಿಪರ ಸಂಸ್ಥೆಗಳು ವೃತ್ತಿಪರ ಕೋರ್ಸುಗಳಿಗೆ ಕಡ್ಡಾಯವಾಗಿ ಎಐಸಿಟಿಇ, ನವದೆಹಲಿ ಯಿಂದ ಅನುಮೋದನೆಯನ್ನು ಪಡೆಯತಕ್ಕದ್ದು. ಹಿಂದಿನ ವರ್ಷದಲ್ಲಿ ಸರ್ಕಾರದಿಂದ ಸಂಯೋಜನೆಗೆ ಒಳಪಟ್ಟಿದ್ದಲ್ಲಿ ಮಾತ್ರ ಪ್ರಸ್ತುತ ವರ್ಷದಲ್ಲಿ ಸೀಟು ಮ್ಯಾಟ್ರಿಕ್ಸ್‌ನ್ನು ಪ್ರಚುರ ಪಡಿಸಲಾಗುವುದು. ಒಂದು ವೇಳೆ ಸಂಯೋಜನೆ ಆದೇಶ ಹೊಂದದಿದ್ದಲ್ಲಿ ಅಂತಹ ಸಂಸ್ಥೆಗಳ ಸೀಟು ಮ್ಯಾಟ್ರಿಕ್ಸ್‌ನ್ನು ಪ್ರಚುರ ಪಡಿಸಲಾಗುವುದಿಲ್ಲ. ಆದುದರಿಂದ ಸಂಯೋಜನೆ ಹೊಂದಿರುವ ಆದೇಶದ ಪ್ರತಿಗಳನ್ನು ಏಪ್ರಿಲ್ 2019ರ ಅಂತ್ಯದೊಳಗಾಗಿ ಉನ್ನತ ಶಿಕ್ಷಣ (ತಾಂತ್ರಿಕ) ಶಾಖೆಗೆ ಕಡ್ಡಾಯವಾಗಿ ಸಲ್ಲಿಸುವುದು.

4. ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಕಾರಣಾಂತರಗಳಿಂದ ಒಂದು ವೇಳೆ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ್ದಲ್ಲಿ, ಸದರಿ ವಿದ್ಯಾರ್ಥಿಗಳು ಪ್ರವೇಶಾತಿ ಸಂದರ್ಭದಲ್ಲಿ ಸಂಸ್ಥೆಗೆ ಸಲ್ಲಿಸಲ್ಪಟ್ಟ ಮೂಲ ದಾಖಲೆಗಳನ್ನು ಮತ್ತು ಬೋಧನಾ ಶುಲ್ಕವನ್ನು ತಕ್ಷಣವೇ ಹಿಂದಿರುಗಿಸುವ ಬಗ್ಗೆ ಸಂಸ್ಥೆಗಳು/ಕಾಲೇಜುಗಳು ಕ್ರಮವಹಿಸುವುದು. ಈ ಬಗ್ಗೆ ಕಾಲಕಾಲಕ್ಕೆ ಎಐಸಿಟಿಇ, ನವದೆಹಲಿ ಇವರು ಹೊರಡಿಸಿರುವ ಮಾರ್ಗಸೂಚಿ, ನಿಯಮಗಳನ್ನು ಪಾಲಿಸುವುದು.

3 APR 2019

-2..

5. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಹಂಚಿಕೆಗೊಂಡ ಅಭ್ಯರ್ಥಿಗಳಿಂದ ಹೆಚ್ಚಿನ ಶುಲ್ಕವನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಇದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, 2019-20ನೇ ಸಾಲಿಗೆ ಸರ್ಕಾರವು ನಿಗದಿ ಪಡಿಸಿರುವ ಬೋಧನಾ ಶುಲ್ಕ ಮತ್ತು ವಿಶ್ವವಿದ್ಯಾಲಯ ಶುಲ್ಕವನ್ನು ಮಾತ್ರ ಪಡೆಯುವುದು.

28/3/19

(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಇವರಿಗೆ :

1) ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಜ್ಞಾನಸಂಗಮ, ಬೆಳಗಾಂ.
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು (ಈ ಸುತ್ತೋಲೆಯನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಪ್ರಕಟಿಸುವಂತೆ ಕೋರಿದೆ).
3) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ಉಪ ಕುಲಪತಿಗಳು, ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು
5) ಅಧ್ಯಕ್ಷರು/ ಕಾರ್ಯದರ್ಶಿಗಳು, ಕಾಮೆಡ್-ಕೆ, ನಂ.132, 2ನೇ ಮಹಡಿ, 17ನೇ ಕ್ರಾಸ್, 11ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6) ಅಧ್ಯಕ್ಷರು/ ಕಾರ್ಯದರ್ಶಿಗಳು, ಕರ್ನಾಟಕ ಅನುದಾನರಹಿತ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸಂಘ (KUPECA), ಮಲ್ಲೇಶ್ವರಂ, ಬೆಂಗಳೂರು.
7) ಅಧ್ಯಕ್ಷರು/ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮತೀಯ ಅಲ್ಪಸಂಖ್ಯಾತ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸಂಘ, ನಂ.143, ಸೂರ್ಯಮುಖಿ ಅಪಾರ್ಟ್‌ಮೆಂಟ್ಸ್ 4ನೇ ಮಹಡಿ, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು.
8) ಎಲ್ಲಾ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ (ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಮುಖಾಂತರ)
9) ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
11) ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ (ಕಾಲೇಜು ಮತ್ತು ತಾಂತ್ರಿಕ).